**ಸಾಕ್ಷಿದಾರರನ್ನು ದಿನಾಂಕಃ 22.02.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ವಕೀಲರಾದ ಶ್ರೀ ಬಿ.ಎಲ್.ಟಿ ರವರಿಂದಃ**

ದಾವಾ ಆಸ್ತಿ ಕೆಂಪಮ್ಮರವರಿಗೆ ಸೇರಿದ್ದ ಆಸ್ತಿ ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿದು ನನಗೆ ಸೇರಿದ ಆಸ್ತಿ ಅಲ್ಲ ಎಂದು ನುಡಿಯುತ್ತಾರೆ. ದಾವಾ ಷೆಢ್ಯೂಲಿನಲ್ಲಿ ನಮೂದಿಸಿರುವ ಆಸ್ತಿಗೂ ನನಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿ. ತಾವು ಖರೀದಿ ಮಾಡಿರುವ ಆಸ್ತಿಯ ಪೂರ್ವಕ್ಕೆ ಏನಿದೆ ಎಂದು ಕೇಳಲಾಗಿ ಸಾಕ್ಷಿಯು ರಸ್ತೆ ಎಂದು ನುಡಿಯುತ್ತಾರೆ. ಪಶ್ಚಿಮಕ್ಕೆ ಮತ್ತು ಉತ್ತರಕ್ಕೆ ಮಲ್ಲಣ್ಣರವರಿಗೆ ಸೇರಿದ ಜಮೀನು, ದಕ್ಷಿಣಕ್ಕೆ ಕಾಳನಿಂಗಮ್ಮ ಮತ್ತು ಮಹದೇವ್ ರವರಿಗೆ ಸೇರಿದ ಜಮೀನು ಎಂದು ನುಡಿಯುತ್ತಾರೆ. ಹೊನ್ನೇಗೌಡರವರಿಗೆ 3 ಎಕರೆ ಜಮೀನು ಮಂಜೂರಾಗಿದ್ದು ಅವರಿಂದ ನಾನು 2 ಎಕರೆ 22 ಗುಂಟೆಯನ್ನು ಖರೀದಿ ಮಾಡಿರುತ್ತೇನೆ. 3 ಎಕರೆಯಲ್ಲಿ 2 ಎಕರೆ 22 ಗುಂಟೆ ತಾವು ಖರೀದಿ ಮಾಡಿದ್ದು, ಇನ್ನುಳಿಕೆ 18 ಗುಂಟೆ ಯಾರ ಹೆಸರಿಗೆ ಇರುತ್ತದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ. ದುರಸ್ಥಾದ ನಂತರ 2 ಎಕರೆ 22 ಗುಂಟೆ ಇದೆ ಎಂದು ನುಡಿಯುತ್ತಾರೆ. 3 ಎಕರೆ ಪೈಕಿ 18 ಗುಂಟೆ ಯಾವ ದಿಕ್ಕಿಗೆ ಇರುತ್ತದೆ ಎಂದು ಗೊತ್ತಾ ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ.

ತಾವು ಖರೀದಿ ಮಾಡುವ ಕಾಲಕ್ಕೆ ಏನು ದಾಖಲೆ ನೋಡಿ ಖರೀದಿ ಮಾಡಿರುತ್ತೀರಾ ಎಂದರೆ ಸಾಗುವಳಿ ಚೀಟಿ, ನಕ್ಷೆ , ಪಹಣಿ ನೋಡಿ ಖರೀದಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ಚೆಕ್ಕುಬಂಧಿ ಮತ್ತು ನಾನು ಖರೀದಿ ಮಾಡಿರುವ ಆಸ್ತಿಯ ಚೆಕ್ಕುಬಂಧಿ ಬೇರೆ ಬೇರೆ ಎಂದರೆ ಸರಿ . 2 ಎಕರೆ 22 ಗುಂಟೆ ಆಸ್ತಿಯನ್ನು ತಾವು ಖರೀದಿ ಮಾಡಿರುತ್ತೇನೆ ಎಂದು ತಾವು ಹೇಳಿದ್ದು ಆಸ್ತಿಯಲ್ಲಿ ಏನು ಇದ್ದವು ಎಂದರೆ 22 ಮಾವಿನ ಮರ ಮತ್ತು 8 ಬೇವಿನ ಮರ ಇದ್ದವು ಎಂದು ನುಡಿಯುತ್ತಾರೆ. ಕ್ರಯಪತ್ರದಲ್ಲಿ ಬೇವಿನ ಮರಗಳು ಮತ್ತು ಮಾವಿನ ಮರಗಳು ಇರುವುದನ್ನು ನಮೂದಿಸಿರುತ್ತೀರಾ ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ.

ದಾವಾ ಸರ್ವೇ ನಂಬರ್ ಆಸ್ತಿಯಲ್ಲಿ ವಾದಿ ಕೆಂಪಮ್ಮ 2007 ರ ಪೂರ್ವದಲ್ಲಿ ಬಗರ್ ಹುಕುಂ ಅಡಿಯಲ್ಲಿ ವ್ಯವಸಾಯ ಮಾಡಿಕೊಂಡು ಬರುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ದಿಃ 31.02.2007 ರಂದು ದಾವಾ ಆಸ್ತಿಯ ಮಂಜೂರಾತಿ ಪತ್ರವನ್ನು ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಗೆ ನಿಪಿ-12 ಮತ್ತು

13 ಫೋಟೋಗಳನ್ನು ತೋರಿಸಿ ವಾದಿಯು ತಮಗೆ ಸೇರಿದ ಜಮೀನಿನಲ್ಲಿ ಮಾವಿನ ಮರ ಇರುವಲ್ಲಿ ನಿಂತು ಫೋಟೋ ತೆಗಸಿರುತ್ತಾರೆ ಎಂದರೆ ಸಾಕ್ಷಿಯು ಇರಬಹುದು ಎನ್ನುತ್ತಾರೆ. ನಾನು ಕ್ರಯಕ್ಕೆ ಪಡೆದಿರುವ ಆಸ್ತಿಯಲ್ಲಿ ಮಾವಿನ ಮರವಾಗಲಿ, ಬೇವಿನ ಮರವಾಗಲಿ ಇಲ್ಲ ಎಂದರೆ ಸರಿಯಲ್ಲ.

ವಾದಿಯು ನನಗೆ ಮಾರಾಟ ಮಾಡಿದ ಹೊನ್ನೇಗೌಡರವರ ವಿರುದ್ಧ ಅಸಲು ದಾವಾ ಸಂಃ412/2012 ಎಂದು ಶಾಶ್ವತ ನಿರ್ಬಂಧಕಾಜ್ಞೆ ಕೋರಿ ದಾವೆ ಮಾಡಿದ್ದರು ಎಂದರೆ ಸರಿ. ಸದರಿ ದಾವೆಯು ವಾದಿಯ ಪರ ಡಿಕ್ರಿಯಾಗಿರುತ್ತದೆ ಎಂದರೆ ಸರಿ. ತಾವು ಖರೀದಿ ಮಾಡುವ ಕಾಲಕ್ಕೆ ವಾದಿ ಮತ್ತು ಹೊನ್ನೇಗೌಡರ ನಡುವೆ ವಿವಾದ ಇರುವ ವಿಚಾರ ಗೊತ್ತಿತ್ತ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ತಾವು ಖರೀದಿ ಮಾಡುವ ಕಾಲಕ್ಕೆ 11-ಇ ನಕ್ಷೆ ತಯಾರಿ ಮಾಡಿಸಿ ಖರೀದಿ ಮಾಡಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ಆಗಾಗಲೆ ನಕ್ಷೆ ಇದ್ದುದ್ದರಿಂದ ಸರ್ವೆ ಮಾಡಿಸಿ ನಕ್ಷೆ ಮಾಡಿಸಿಲ್ಲ ಎಂದು ನುಡಿಯುತ್ತಾರೆ.

ನಾನು ವಾದಿಗೆ ತೊಂದರೆ ಕೊಡುತ್ತಿದ್ದರಿಂದ ವಾದಿಯು ನನ್ನ ವಿರುದ್ಧ ಪೊಲೀಸ್ ಠಾಣೆಗೆ ದೂರು ನೀಡಿದ್ದರು ಎಂದರೆ ಸಾಕ್ಷಿಯು ನಾನು ತೊಂದರೆ ಕೊಟ್ಟಿಲ್ಲ, ಉದ್ದೇಶಪೂರ್ವಕವಾಗಿ ದೂರು ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಪೊಲೀಸರು ನನ್ನನ್ನು ಠಾಣಗೆ ಕರೆಯಿಸಿ ತೊಂದರೆ ಕೊಡಬಾರದು ಎಂದು ಹೇಳಿರುತ್ತಾರೆ ಎಂದರೆ ಸಾಕ್ಷಿಯು ಠಾಣೆಗೆ ಹೋಗಿಲ್ಲ ಎಂದು ನುಡಿಯುತ್ತಾರೆ.

ದಿಃ 28.11.2021 ರಂದು ಸಂಜೆ 4.00 ಗಂಟೆಯ ಸಮಯದಲ್ಲಿ ನಾನು ನನ್ನ ಸಹಚರರೊಂದಿಗೆ ಗುಂಪು ಕಟ್ಟಿಕೊಂಡು ಬಂದು ವಾದಿಯು ಸ್ವಾಧೀನ ಇರುವ ದಾವಾ ಆಸ್ತಿಗೆ ತೊಂದರೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಅಸಲು ದಾವಾ ಸಂಃ 200/2022 ರಂತೆ ನಾನು ವಾದಿ ಮತ್ತು ವಾದಿಯ ಗಂಡನ ವಿರುದ್ಧ ಇದೇ ಹೆಚ್.ಡಿ.ಕೋಟೆಯ ನ್ಯಾಯಾಲಯದಲ್ಲಿ ನಾನು ಖರೀದಿಸಿದ ಆಸ್ತಿಗೆ ಶಾಶ್ವತ ನಿರ್ಬಂಧಕಾಜ್ಞೆ ಆದೇಶ ಕೋರಿ ದಾವೆ ಸಲ್ಲಿಸಿದ್ದು, ಸದರಿ ದಾವೆಯು ಪ್ರಸ್ತುತ 2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ಬಾಕಿ ಇದೆ ಎಂದರೆ ಸರಿ . ಸದರಿ ದಾವೆಯಲ್ಲಿ ನಾನು ಮಧ್ಯಂತರ ಅರ್ಜಿ ಸಲ್ಲಿಸಿ ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶ ಕೋರಿ ಅರ್ಜಿ ಸಲ್ಲಿಸಿದ್ದೆ ಎಂದರೆ ಸರಿ. ಸದರಿ ಅರ್ಜಿಯು ವಜಾ ಆಗಿದೆ ಎಂದರೆ ಸರಿ. ದೃಢೀಕೃತ ಆದೇಶದ ಪ್ರತಿಯನ್ನು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿಯು ಹೌದು ಎನ್ನುತ್ತಾರೆ. ಸರಿದ ಆದೇಶದ ಪ್ರತಿಯನ್ನು ವಾದಿಯ ಪರ **confront** ಮಾಡುವ ಮೂಲಕ **ನಿಪಿ-17** ಎಂದು ಗುರುತಿಸಲಾಯಿತು. ನಾನು ವಾದಿಗೆ ಆಗಿಂದಾಗ್ಗೆ ತೊಂದರೆ ಕೊಡುತ್ತಾ ಬಂದಿರುತ್ತೇನೆ ಎಂದರೆ ಸರಿಯಲ್ಲ.

ದಾವಾ ಆಸ್ತಿಗೂ ನನಗೂ ಯಾವುದೇ ಸಂಬಂಧ ಇಲ್ಲದೇ ಇದ್ದರೂ ವಾದಿಯ ಸ್ವಾಧೀನಕ್ಕೆ ತೊಂದರೆ ಕೊಡುತ್ತಿದ್ದೇನೆ ಎಂದರೆ ಸಾಕ್ಷಿಯು ದಾವಾ ಆಸ್ತಿಗೂ ನನಗೂ ಯಾವುದೇ ಸಂಬಂಧ ಇಲ್ಲ, ನಾನು ತೊಂದರೆ ಕೊಟ್ಟಿಲ್ಲ ಎಂದು ನುಡಿಯುತ್ತಾರೆ.

**<u>ಮರು ವಿಚಾರಣೆ : ಇಲ್ಲ</u>**

(ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸಾ ಸ ಇ ಒ.,**

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ಹೆಗ್ಗಡದೇವನಕೋಟೆ.**